ಕಂದಾಯ ಇಲಾಖೆ

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಪಹಣಿ:ಅಪೀಲು:62/2015-16 ದಿನಾಂಕ:09.06.2016.

**ಉಪಸ್ಥಿತರು: ಅವಿನಾಶ ಮೆನನ್ ರಾಜೇಂದ್ರನ್, ಭಾ.ಆ.ಸೇ**

**ಸಹಾಯಕ ಆಯುಕ್ತರು, ಹೊಸಪೇಟೆ.**

**ವಾದಿಗಳು: ಶ್ರೀ/ ಶ್ರೀಮತಿ**

1] ಕೌಲೂರು ಇಟಗಿ ತಾಯವ್ವ ಗಂಡ ದಿ॥ ಕಾಳಪ್ಪ,
ತಂದೆ ವೀರಾಪುರದ ಸಣ್ಣ ಸಿದ್ದಪ್ಪ,
ವಾಸ: ಹೊಳಗುಂದಿ ಗ್ರಾಮ, ಹೂವಿನಹಡಗಲಿ
ತಾಲೂಕು, ಬಳ್ಳಾರಿ ಜಿಲ್ಲೆ.

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1] ತಹಶೀಲ್ದಾರರು, ಹೂವಿನಹಡಗಲಿ
2] ಹುಲಿಗೆವ್ವ ಗಂಡ ಬಾರಿಕರ ಗೋಣೆಪ್ಪ,
ವಾಸ: ಹೊಳಗುಂದಿ ಗ್ರಾಮ, ಹೂವಿನಹಡಗಲಿ
ತಾಲೂಕು, ಬಳ್ಳಾರಿ ಜಿಲ್ಲೆ.

[ಶ್ರೀ ಪ್ರಶಾಂತ ವಿ. ಪಾಟೀಲ್, ವಕೀಲರು, ಹೊಸಪೇಟೆ]

**ವ್ಯಾಜ್ಯದ ಜಮೀನು:**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹಡಗಲಿ | ಇಟ್ಟಿಗಿ | ಹೊಳಗುಂದಿ | 984/ಬಿ | 08 ಎಕರೆ 97 ಸೆಂಟ್ಸ್ |

**ಪೀಠಿಕೆ:-**

ಹಡಗಲಿ ತಾಲೂಕು ಇಟ್ಟಿಗಿ ಹೋಬಳಿ ಹೊಳಗುಂದಿ ಗ್ರಾಮದ ಸ.ನಂ.984/ಬಿ ವಿಸ್ತೀರ್ಣ: 08 ಎಕರೆ 97 ಸೆಂಟ್ಸ್ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹಡಗಲಿ ಇವರ ಕಾರ್ಯಾಲಯದ ಹಿಂಬರಹ ಸಂಖ್ಯೆ: ಸಂ/ಕಂ/ಪಹಣಿ/185/2014-15 ದಿನಾಂಕ:22.08.2014 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136[2] ರಡಿಯಲ್ಲಿ ವಾದಿಪರ ವಕೀಲರು ದಿನಾಂಕ:04.08.2015 ರಂದು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯಾದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:08.09.2015 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಪರ ವಕೀಲರ ಪ್ರಕಾರ, ಸದರಿ ವ್ಯಾಜ್ಯದ ಜಮೀನನ್ನು ವಾದಿಯಾದ ಕೌಲೂರು ಇಟಗಿ ತಾಯವ್ವ ಗಂಡ ದಿ॥ಕಾಳಪ್ಪ, ಇವರು ಬಾರಿಕರ ಗಂಗವ್ವನ ಮಕ್ಕಳು ಗೋಣೆಪ್ಪ, ಕೊಟ್ರಪ್ಪ, ಶಿದ್ದಪ್ಪ, ಪರಮೇಶ್ವರಪ್ಪ, ಇವರಿಂದ ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:22/96-97 ದಿನಾಂಕ:05.01.1966 ರ ಪ್ರಕಾರ ರೂ.1000/- ಗಳಿಗೆ ಕ್ರಯಕ್ಕೆ ಪಡೆದಿರುವುದು ಕ್ರಯ ಪತ್ರದ ಪ್ರತಿ ಹಾಗೂ ಇ.ಸಿ. ಪ್ರತಿಯಿಂದ ಕಂಡು ಬಂದಿರುತ್ತದೆ. ಕ್ರಯಕ್ಕೆ ಪಡೆದ ದಿನದಿಂದಲೂ ವಾದಿಗಳೇ ಸದರಿ ಜಮೀನಿನಲ್ಲಿ ಉಳುಮೆ ಹಾಗೂ ಸ್ವಾಧೀನಾನುಭವವನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ಆದರೆ, ಕ್ರಯಕ್ಕೆ ಪಡೆದ ದಿನದಿಂದಲೂ ಈ ವರೆಗೂ ವಾದಿಗಳ ಹೆಸರು ಪಹಣಿಯಲ್ಲಿ ನಮೂದಾಗಿರುವುದಿಲ್ಲ.

ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ 1968 ರಿಂದ ಈ ವರೆಗಿನ ಪಹಣಿ ಪತ್ರಿಕೆಯಲ್ಲಿ 9 ರಲ್ಲಿ ವಿಕ್ರಯದಾರ-1 ಹೆಂಡತಿ ಪ್ರತಿವಾದಿ-2 ರವರಾದ ಹುಲಿಗೆವ್ವ ಇವರ ಹೆಸರಿನಲ್ಲಿ ನಮೂದಾಗಿದ್ದು, ಆದರೆ ಪಹಣಿ ಕಾಲಂ 10 ರಲ್ಲಿ ಪೂರ್ವ ಪಟ್ಟಾದಾರ ಹುಲಿಗೆವ್ವ ವೀರಾಪುರದ ಸಣ್ಣ ಶೀದ್ದಪ್ಪನ ಮಗಳು ತಾಯವ್ವಗೆ ಕ್ರಯಕ್ಕೆ ಎಂದು ನಮೂದಾಗಿರುವುದು ಕಂಡುಬಂದಿರುತ್ತದೆ. 1968 ರಿಂದ 2003-04 ರವರೆಗೆ ವಾದಿಯ ಹೆಸರು ಪಹಣಿ ಕಾಲಂ 12(2) ರಲ್ಲಿ ಹಾಗೂ ಪಹಣಿ ಕಾಲಂ 10 ರಲ್ಲಿ ನಮೂದಾಗಿದ್ದು, ನಂತರಲ್ಲಿ ಕೇವಲ ಪಹಣಿ ಕಾಲಂ 10 ರಲ್ಲಿ ಮಾತ್ರ ಈವರೆಗೂ ವಾದಿಯ ಹೆಸರು ನಮೂದಾಗಿರುವುದು ಕಂಡು ಬಂದಿರುತ್ತದೆ.

ವಾದಿಗಳು ಹಳೆ ಖರೀದಿ ಪತ್ರದ ಪ್ರಕಾರ ಸದರಿ ವ್ಯಾಜ್ಯದ ಜಮೀನನ್ನು ತಮ್ಮ ಹೆಸರಿಗೆ ಹಕ್ಕು ಬದಲಾವಣೆಗಾಗಿ ಅರ್ಜಿ ಸಲ್ಲಿಸಿದ್ದು, ತಹಶೀಲ್ದಾರರು, ಹಡಗಲಿ ಇವರು ಸಂ.ಕಂ.ಪಹಣಿ.ಹಳೆ ಖರೀದಿ:185/2014-15 ದಿನಾಂಕ:22.08.2014 ರ ಮೂಲಕ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಸೂಚಿಸಿ ಹಿಂಬರಹ ನೀಡಿರುವ ಮೇರೆಗೆ ಸದರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಹಿಂಬರಹದಿಂದ ಬಾದಿತಗೊಂಡ ವಾದಿಯು ತಮ್ಮ ಹೆಸರಿಗೆ ನೋಂದಾಯಿತ ಕ್ರಯ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಮನವಿ ಸಲ್ಲಿಸಿರುತ್ತಾರೆ.

ಪ್ರತಿವಾದಿ-2 ರ ಪರ ವಕೀಲರು ದಿನಾಂಕ:03.03.2016 ರ ವಿಚಾರಣೆಗೆ ಹಾಜರಾಗಿ, ಪ್ರತಿವಾದಿ-2 ರವರು ಮರಣ ಹೊಂದಿರುವುದಾಗಿ ಸದರಿ ವ್ಯಾಜ್ಯದ ಜಮೀನು ಪಿತ್ರಾರ್ಜಿತ ಆಸ್ತಿಯಾಗಿರುವುದಾಗಿ, ಸದರಿ ಜಮೀನಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಸಲ್ಲಿಸುವುದಾಗಿ ತಿಳಿಸಿದ್ದು ನಂತರ ಯಾವುದೇ ವಿಚಾರಣೆಗೆ ಹಾಜರಾಗಿರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಸಲ್ಲಿಸದಿರುವುದು ಕಂಡುಬಂದಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಹಡಗಲಿ ತಾಲೂಕು ಇಟ್ಟಿಗಿ ಹೋಬಳಿ ಹೊಳಗುಂದಿ ಗ್ರಾಮದ ಸ.ನಂ.984/ಬಿ ವಿಸ್ತೀರ್ಣ: 08 ಎಕರೆ 97 ಸೆಂಟ್ಸ್ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:22/96-97 ದಿನಾಂಕ:05.01.1966 ರ ಪ್ರಕಾರ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡಂತೆ

## -: ಆದೇಶ:-

ಪೀಠಿಕೆಯುಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ಅಂಗಿಕರಿಸುತ್ತಾ,** ಹಡಗಲಿ ತಾಲೂಕು ಇಟ್ಟಿಗಿ ಹೋಬಳಿ ಹೊಳಗುಂದಿ ಗ್ರಾಮದ ಸ.ನಂ.984/ಬಿ ವಿಸ್ತೀರ್ಣ: 08 ಎಕರೆ 97 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ನೋಂದಾಯಿತ ಕ್ರಯು ದಸ್ತಾವೇಜು ಸಂಖ್ಯೆ:22/96-97 ದಿನಾಂಕ:05.01.1966 ರ ಪ್ರಕಾರ ವಾದಿಯು ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು ಹಡಗಲಿ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:09.06.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ಅವಿನಾಶ ಮೆನನ್ ರಾಜೇಂದ್ರನ್, ಭಾ.ಆ.ಸೇ]
ಸಹಾಯಕ ಆಯುಕ್ತರು,
ಹೊಸಪೇಟೆ.

ವಾದಿ: ಪ್ರತಿವಾದಿಗಳಿಗೆ
<u>ಪ್ರತಿಯನ್ನು</u>:- ತಹಶೀಲ್ದಾರರು, ಹಡಗಲಿ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ
ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.